**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಸಂಚಾರಿ ನ್ಯಾಯಾಲಯ, ಅಜ್ಜಂಪುರ**

**ಕ್ರಿ ಮೊ ಸಂಖ್ಯೆ 213/2020**

**ಪಿರ್ಯಾದಿಃ** **ಶ್ರೀ ಸಿ.ಬಿ.ಶಿವಮೂರ್ತಿ**

**-ವಿರುದ್ದ-**

**ಆರೋಪಿ/ತರುಃ** **ಶ್ರೀ ಚಂದ್ರಪ್ಪ.ಟಿ.ಎಂ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲೂ-1. ಶ್ರೀ ಸಿ.ಬಿ.ಶಿವಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಗೆ ತುಂಬಾ ವರ್ಷಗಳಿಂದ ಪರಿಚಯವಿದ್ದು, ಆರೋಪಿಯಾದ ನೀವು ಅಡಿಕೆ ವ್ಯಾಪಾರವನ್ನು ಮಾಡುತ್ತಿದ್ದು, ಪಿರ್ಯಾದುದಾರರು ಅವರ ಸ್ವಂತ ತೋಟದಲ್ಲಿ ಬೆಳೆದಂತಹ ಅಡಿಕೆಯನ್ನು ಆರೋಪಿಯಾದ ನೀವು ದಿನಾಂಕ 10.09.2019 ರಂದು 65 ಕ್ವಿಂಟಾಲ್ ಒಳಅಡಿಕೆಯನ್ನು ಒಂದು ಕ್ವಿಂಟಾಲ್‌ಗೆ 40 ಸಾವಿರಗಳಂತೆ ಒಟ್ಟು 26,00,000/- ರೂಪಾಯಿಗಳಿಗೆ ವ್ಯಾಪಾರ ಮಾಡಿ ತೆಗೆದುಕೊಂಡಿದ್ದು, ಆ

ದಿವಸ ಆರೋಪಿಯಾದ ನೀವು ರೂ.63,733/- ಗಳನ್ನು ಮುಂಗಡವಾಗಿ ನೀಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-3:ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಬಾಕಿ ಉಳಿದ ರೂ.25,36,267/- ಗಳನ್ನು ಕೊಡುತ್ತೇನೆ ಎಂದು ಹೇಳಿ ಉಳಿದ ಹಣ ರೂ.25,36,267/- ಗಳಿಗೆ ದಿನಾಂಕ 04.12.2019 ರ ದಿನಾಂಕವನ್ನು ನಮೂದಿಸಿ ಇಂಡಿಯನ್ ಬ್ಯಾಂಕ್, ಗೊಪ್ಪೆನಹಳ್ಳಿ ಶಾಖೆ, ಚನ್ನಗಿರಿ ತಾಲ್ಲೂಕಿಗೆ ಸೇರಿದ ಚೆಕ್ ಸಂಖ್ಯೆ 197935 ನ್ನು ರೂ.25,36,267/- ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿಯು ಕಾರ್ಪೋರೇಷನ್ ಬ್ಯಾಂಕ್, ಶಿವನಿ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ **'ಸಾಕಷ್ಟು ಹಣವಿಲ್ಲ'** ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-3:ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದಿಯು ದಿನಾಂಕ 27.12.2019 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಅನ್ನು ಆರೋಪಿಯಾದ ನೀವು ಸ್ವೀಕರಿಸದೆ ತಿರಸ್ಕರಿಸಿದ ಕಾರಣ ಸದರಿ ನೋಟೀಸ್ ಜಾರಿಯಾಗದೆ ನಾಟ್ ಕ್ಲೇಮುಡ ಎಂದು ದಿನಾಂಕ 07.01.2020 ರಂದು ವಾಪಸ್ಸು ಬಂದಿದ್ದು ಮತ್ತು ಆರೋಪಿಯಾದ ನೀವು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-4: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ

ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: False

ಪ್ರಶ್ನೆ-5: ನೀವು ಏನಾದರೂ ಹೇಳುವುದಿದೆಯಾ?

ಉತ್ತರ: Not at this moment

ಪ್ರಶ್ನೆ-6: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 13.02.2026

**ಸಹಿ/-**

**(ರಾಹುಲ್ ಶೆಟ್ಟಿಗಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**
**(ಸಂಚಾರಿ ನ್ಯಾಯಾಲಯ, ಅಜ್ಜಂಪುರ)**